ದೀವಟಿಗೆ

ವಾರಪತ್ರಿಕೆ, ಸಂಪಾದಕ: ಸರಿಮನೆ ನಾಗರಾಜ್.

ಖಾಸಗಿ ಪ್ರಸಾರಕ್ಕಾಗಿ | ಕೊಪ್ಪ ೬-೬-೧೯೮೨ ಭಾನುವಾರ | ೧೯

ಎರಡೇ ಪುಟ, ಅದೂ ತಡವಾಗಿ...

ಸದ್ಯದ ನಮ್ಮ ಶಕ್ತಿಗೆ ಮೀರಿದ ತೊಡಕುಗಳಿಂದಾಗಿ ಈ ವಾರದ 'ದೀವಟಿಗೆ' ತಡವಾಗಿಯೂ ಎರಡೇ ಪುಟ ಪ್ರಕಟವಾಗಿದೆ. ಓದುಗರ ಸಹಕಾರ ಎಂದಿನಂತೆಯೇ ಇರುತ್ತೆಂದು ನಂಬುತ್ತೇವೆ. —ಸಂ.

ಕೊಪ್ಪ ಪುರಸಭೆಯ ಅಭಿವೃದ್ಧಿ ಕಾರ್ಯಗಳಿಗಾಗಿ
೧ ಲಕ್ಷ ರೂ. ವಿಶೇಷ ಗ್ರ್ಯಾಂಟ್

ಕೊಪ್ಪ : ಇಲ್ಲಿನ ಪುರಸಭೆಗೆ ಅಭಿವೃದ್ಧಿ ಗ್ರ್ಯಾಂಟ್ ೫೦ ಸಾವಿರ ರೂ. ಗಳಲ್ಲದೆ ವಿಶೇಷ ಸಹಾಯಧನವಾಗಿ ೧ ಲಕ್ಷ ರೂ. ಮಂಜೂರಾಗಿರುವುದಾಗಿ ಪುರಸಭಾಧ್ಯಕ್ಷ ಮೊಹಮದ್ ಸಾದಿಕ್ ತಿಳಿಸಿದ್ದಾರೆ.

ಇದಲ್ಲದೆ ಈ ವರ್ಷ ಹುಡ್ಕೊ ಯೋಜನೆಯಲ್ಲಿ ೩೮ ಮನೆಗಳಿಗಾಗಿ ೧ ಲಕ್ಷ ೧೫ ಸಾವಿರ ರೂ. ಮತ್ತು ೧೨ ಮನೆ ರಿಪೇರಿಗಾಗಿ ೫೫ ಸಾವಿರ ರೂ. ಮಂಜೂರಾಗಿರುವುದಾಗಿಯೂ ಅವರು ತಿಳಿಸಿದ್ದಾರೆ.

ಭೂ ಅಭಿವೃದ್ಧಿ ಬ್ಯಾಂಕ್ ನೌಕರರ ಜಿಲ್ಲಾ ಯೂನಿಯನ್

ನರಸಿಂಹರಾಜಪುರ: ಕರ್ನಾಟಕ ಪ್ರಾ. ಸ. ಭೂ ಅಭಿವೃದ್ಧಿ ಬ್ಯಾಂಕ್ ನೌಕರರ ರಾಜ್ಯ ಯೂನಿಯನ್ ಉಪಾಧ್ಯಕ್ಷ ರಾಜೇಗೌಡರ ಅಧ್ಯಕ್ಷತೆಯಲ್ಲಿ ಈಚೆಗೆ ಇಲ್ಲಿನ ಭೂ ಅಭಿವೃದ್ಧಿ ಬ್ಯಾಂಕಿನ ಸ್ವರ್ಣಮಂಟಪದಲ್ಲಿ ನಡೆದ ಜಿಲ್ಲಾ ಸಮಾವೇಶದಲ್ಲಿ ಸಿಬ್ಬಂದಿ ನೌಕರರ ಜಿಲ್ಲಾ ಯೂನಿಯನ್ ರಚಿಸಲಾಗಿದೆ ಎಸ್. ಎಸ್. ಶಾಂತಕುಮಾರ್ (ಅಧ್ಯಕ್ಷ) ಕೆಂಗೇಗೌಡ (ಉಪಾಧ್ಯಕ್ಷ), ಎಂ. ಎಸ್. ರೇವಣಸಿದ್ದಪ್ಪ (ಕಾರ್ಯದರ್ಶಿ), ವಿ.ಎಸ್. ಕೃಷ್ಣಮೂರ್ತಿ (ಸಹಕಾರ್ಯದರ್ಶಿ) ಮತ್ತು ಜಿಲ್ಲೆಯ ಎಲ್ಲಾ ಬ್ಯಾಂಕುಗಳ ಒಬ್ಬೊಬ್ಬ ಪ್ರತಿನಿಧಿಯನ್ನು ಆಯ್ಕೆ ಮಾಡಲಾಗಿದೆ.

ಅಗಳಗಂಡಿಗೆ ಮುಂದಿನವರ್ಷ ಸರ್ಕಾರಿ ಪ್ರೌಢಶಾಲೆ

ಎತ್ತಿನಹಟ್ಟಿ: ಅಗಳಗಂಡಿ ಮತ್ತು ಸುತ್ತಮುತ್ತಲ ಹಳ್ಳಿಗಳ ಜನರ ಬಹು ವರ್ಷಗಳ ಬೇಡಿಕೆಯಾದ ಸರ್ಕಾರಿ ಪ್ರೌಢಶಾಲೆ ಬರುವ ವರ್ಷ ಕೈಗೂಡಲಿದೆ.

ಈ ವಿಷಯ ಇಲ್ಲಿ ಈಚೆಗೆ ತಿಳಿಸಿದ ಬೇಗಾನೆ ರಾಮಯ್ಯನವರು, ಈ ವರ್ಷ ಶೃಂಗೇರಿ ತಾಲೂಕಿಗೆ (ಅಡ್ಡಗದ್ದೆಯ ತೊರೆಹಡ್ಲು ಎಂಬಲ್ಲಿ) ಈಗಾಗಲೆ ಸರ್ಕಾರಿ ಪ್ರೌಢಶಾಲೆಯನ್ನೂ ಕೊಪ್ಪ ತಾಲೂಕಿನ ಸಾವೇಗೆ ಒಂದು ಖಾಸಗಿ ಪ್ರೌಢಶಾಲೆಯನ್ನೂ ಮಂಜೂರು ಮಾಡಿಸಿರುವುದಾಗಿ ತಿಳಿಸಿ, ತಮ್ಮ ಕ್ಷೇತ್ರದ ಮೂರೂ ತಾಲೂಕುಗಳಲ್ಲಿ ಒಂದೊಂದೇ ತಾಲೂಕಿಗೆ ಸ॥ ಪ್ರೌಢಶಾಲೆ ಒದಗಿಸುತ್ತಿರುವುದಾಗಿ ತಿಳಿಸಿದರು.

ಎಸ್‌ವಿಎಂರಿಗೆ ಡಾಕ್ಟರೇಟ್

ಕೊಪ್ಪ: ಇಲ್ಲಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಕನ್ನಡ ಅಧ್ಯಾಪಕರಾಗಿರುವ ಎಸ್. ವಿ. ಮಲ್ಲಿಕಾರ್ಜುನ ಭಟ್ಟರ "ಕನ್ನಡದಲ್ಲಿ ನಳಚರಿತ್ರೆಗಳು" ಎಂಬ ಸಂಶೋಧನಗ್ರಂಥಕ್ಕೆ ಮೈಸೂರು ವಿಶ್ವ ವಿದ್ಯಾನಿಲಯವು ಡಾಕ್ಟೊರೇಟ್ (ಪಿ. ಹೆಚ್‌ಡಿ.) ಪದವಿ ನೀಡಿ ಗೌರವಿಸಿದೆ. ಡಾ॥ ಎಸ್‌ವಿಎಂರವರಿಗೆ 'ದೀವಟಿಗೆ' ಬಳಗದ ಹಾರ್ದಿಕ ಶುಭಾಶಯ

ಶೃಂಗೇರಿ ಪೋಲೀಸರಿಗೆ ಪ್ರಶಂಸೆ

ಶೃಂಗೇರಿ: ಇಲ್ಲಿಗೆ ಸಮೀಪದ ಆನೆಗುಂದ ದೇವಸ್ಥಾನದ ಗೋಪಾಲಕೃಷ್ಣ ಸ್ವಾಮಿಯ ಬಂಗಾರದ ಮುಖವಾಡ ಕಳವಾಗಿದ್ದನ್ನು ಪತ್ತೆ ಹಚ್ಚುವಲ್ಲಿ ಸಾಹಸದ ಕರ್ತವ್ಯ ಕ್ರಮ ಕೈಗೊಂಡ ಇಲ್ಲಿನ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಹೆಚ್. ಎನ್. ಅಶ್ವತ್ಥನಾರಾಯಣರಾವ್ ಮತ್ತವರ ಸಿಬ್ಬಂದಿಯನ್ನು ದೇವಸ್ಥಾನದ ಭಕ್ತಮಂಡಲಿ ಮತ್ತು ಊರ ಜನ ಹೃತ್ಪೂರ್ವಕವಾಗಿ ಅಭಿನಂದಿಸಿದ್ದಾರೆ

ಕಮ್ಮರಡಿ-ಬೆಂಗಳೂರು ಬಸ್ ಸಂಪರ್ಕ: ಮಂತ್ರಿಗಳಿಂದ ಪರಿಶೀಲನೆಯ ಭರವಸೆ

ಕಮ್ಮರಡಿ : ಇಲ್ಲಿಂದ ಬೆಂಗಳೂರಿಗೆ ನೇರ ಬಸ್ ಸೌಕರ್ಯ ದೊರೆಯುವಂತೆ ಮಾಡಲು, ಹಾಲಿ ತೀರ್ಥಹಳ್ಳಿಯಲ್ಲಿ ತಂಗುವ [illegible] ಸರ್ಕಾರಿ ಬಸ್‌ಗಳಲ್ಲಿ ಒಂದನ್ನು ಈ ಮಾರ್ಗವಾಗಿ ಶೃಂಗೇರಿಗೆ ಓಡಿಸುವ ಬಗ್ಗೆ ಕೂಡಲೇ ಪರಿಶೀಲಿಸುವುದಾಗಿ ಮಂತ್ರಿ ಬೇಗಾನೆ ರಾಮಯ್ಯ ಇಲ್ಲಿನ ಜನರಿಗೆ ಭರವಸೆ ಇತ್ತಿದ್ದಾರೆ.

ಅವರು ಮೇ ೨೯ರಂದು ಇಲ್ಲಿ ೨ ಲಕ್ಷ ೫೫ ಸಾವಿರ ರೂ. ವೆಚ್ಚದ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆಯ ಶಂಕುಸ್ಥಾಪನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು. ಶಂಕುಸ್ಥಾಪನೆಯನ್ನು ಕಾಮಗಾರಿ ಮಂತ್ರಿ ಕಾಗೋಡು ತಿಮ್ಮಪ್ಪನವರ ಗೈರುಹಾಜರಿಯಲ್ಲಿ ಸಂಸತ್ ಸದಸ್ಯ ಡಿ. ಎಂ. ಪುಟ್ಟೇಗೌಡ ನೆರವೇರಿಸಿದರು.

ಗ್ರಾಮ ಪಂಚಾಯಿತಿಯವರು ಸಲ್ಲಿಸಿದ ಮನವಿ ಪತ್ರಕ್ಕೆ ಉತ್ತರಿಸಿದ ಮಂತ್ರಿಗಳು ಬಿಳುಮನೆ – ತೀರ್ಥಮುತ್ತೂರು ರಸ್ತೆಯ ಮಾವಿನಕಟ್ಟೆಯಿಂದ ತಾಲೂಕಿನ ಗಡಿಯವರೆಗೆ ಟಾರು ಹಾಕಿಸುವ ಕಾಮಗಾರಿಯನ್ನು ಈ ವರ್ಷ ಮಾಡಿಸಿಕೊಡುವುದಾಗಿಯೂ ಭರವಸೆ ಕೊಟ್ಟರು.

ಕಮ್ಮರಡಿಯಲ್ಲಿ ಕಿರಿಯ ಕಾಲೇಜು ತೆರೆಯುವ ಬಗ್ಗೆ ದಾಖಲೆ ಸಿದ್ಧಪಡಿಸುವ ಕೆಲಸ ಮುಕ್ತಾಯಭಾಗ ಮುಗಿದಿದೆಯೆಂದ ಅವರು ಸಾರ್ವಜನಿಕ ವಿದ್ಯಾರ್ಥಿ ನಿಲಯದ ಬೇಡಿಕೆಯನ್ನು ಮುಂದಿನ ವರ್ಷ ಪೂರೈಸುವುದಾಗಿ ಮಾತು ಕೊಟ್ಟರು.

ಕೆರೆಕೊಪ್ಪದ ಕೆರೆಯ ಹೂಳು ತೆಗೆಸುವ ಕೆಲಸವನ್ನು ಸ. ಗ್ರಾ. ಅ. ಯೋಜನೆಯಲ್ಲಿ ನಡೆಸಲು ಸಾಧ್ಯವಾಗುವಂತೆ ದಾಖಲೆ ಸಿದ್ಧಪಡಿಸಲು ಲೋಕೋಪಯೋಗಿ ಇಲಾಖೆಗೆ ಸೂಚಿಸುವುದಾಗಿ ತಿಳಿಸಿದ ಅವರು ಈ ಕೆಲಸಕ್ಕಾಗಿ ಐವತ್ತು ಸಾವಿರ ರೂ. ಬೇಕಾದರೂ ಕ್ಷಣದಲ್ಲೇ ಮಂಜೂರು ಮಾಡಿರುವುದಾಗಿ ಘೋಷಿಸಿದರು. ಗ್ರಾಮದವರಿಲ್ಲ ಒಟ್ಟಾಗಿ ಕೆಲಸ ಮಾಡಿ ಕೆರೆ ದುರಸ್ತಿ ಮಾಡಿಕೊಳ್ಳಲು ಅವರು ಕರೆ ಕೊಟ್ಟರು.

ಮೊದಲಿಗೆ ಕೃಷ್ಣೇಗೌಡ ಸ್ವಾಗತಿಸಿದರು. ಬಿ.ವಿ. ದಾಸ ಜೋಯಿಸ್ ಮನವಿಪತ್ರ ಅರ್ಪಿಸಿದರು. ಡಾ॥ ರಾಮರಾವ್ ವಂದಿಸಿದರು.

ಗಡಿಕಲ್ — ಬಂಡಿಗಡಿ ರಸ್ತೆ: ಮಂತ್ರಿಗಳಲ್ಲಿ ಮನವಿ

ಬಂಡಿಗಡಿ: ಇಲ್ಲಿಂದ ಗಡಿಕಲ್ಲಿಗೆ ಹಾಗೂ ಆ ಮೂಲಕ ತೀರ್ಥಹಳ್ಳಿ ತಾಲೂಕಿಗೆ ನೇರ ಸಂಪರ್ಕ ಕಲ್ಪಿಸುವ ರಸ್ತೆಗೆ ಟಾರು ಹಾಕಿಸಿಕೊಡುವಂತೆ ಮತ್ತು ಬಂಡಿಗಡಿ–ಬಸವಾನಿ ಮಧ್ಯೆ ಸೇತುವೆ ನಿರ್ಮಿಸುವಂತೆ ಬಂಡಿಗಡಿ ಹಾಗೂ ಬಸವಾನಿ ಗ್ರಾಮ ಪಂಚಾಯಿತಿಗಳು ಸರ್ಕಾರವನ್ನು ಮತ್ತೆ ಮತ್ತೆ ಒತ್ತಾಯಿಸಿವೆ.

ಮೇ ೨೯ರಂದು ಇಲ್ಲಿನ ಪಂಚಾಯಿತಿ ಭವನವನ್ನು ಬೇಗಾನೆ ರಾಮಯ್ಯನವರ ಉದ್ಘಾಟಿಸಿದ ಸಂದರ್ಭದಲ್ಲಿ ಎರಡೂ ಪಂಚಾಯಿತಿಗಳ ಅಧ್ಯಕ್ಷರು ಈ ಬೇಡಿಕೆಗಳನ್ನು ಮಂಡಿಸಿದರು.

ಬಂಡಿಗಡಿ ಪಂಚಾಯಿತಿ ವ್ಯಾಪ್ತಿಯಲ್ಲಿ ಬಹಳ ದೂರ ದೂರದ ಗ್ರಾಮಗಳಿವೆ. ಸರಿಯಾದ ರಸ್ತೆಗಳಿಲ್ಲ. ಇರುವ ರಸ್ತೆಗಳು ಪ್ರಾ. ಪಂಚಾಯಿತಿ ಅಧೀನದಲ್ಲಿದ್ದು ಅವುಗಳ ದುರಸ್ತಿ ಪಂಚಾಯಿತಿಗೆ ಹೊರಲಾರದ ಹೊರೆಯಾಗುತ್ತಿದೆ. ರಸ್ತೆ [illegible] ಜನ ಪಂಚಾಯಿತಿಯನ್ನು ದೂರುತ್ತಿದ್ದಾರೆ. ಆದ್ದರಿಂದ ಪ್ರಮುಖ ರಸ್ತೆಗಳನ್ನಾದರೂ ತಾ. ಅ. ಮಂಡಳಿ ಮತ್ತು ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೊಳಪಡಿಸಬೇಕೆಂಬುದು ಪಂಚಾಯಿತಿಯ ಇನ್ನೊಂದು ಪ್ರಮುಖ ಬೇಡಿಕೆ.

ಆದರೆ ಈ ಯಾವ ಬೇಡಿಕೆಗೂ ಮಂತ್ರಿಗಳಿಂದ ಖಚಿತ ಭರವಸೆಯೇನೂ ದೊರೆಯಲಿಲ್ಲ.

ಅರಸು ಇನ್ನಿಲ್ಲ

ಬೆಂಗಳೂರು: ಡಿ. ದೇವರಾಜ ಅರಸು ಜೂನ್ ೬ರ ಸಂಜೆ ೫-೩೦ಕ್ಕೆ ಹೃದಯಾಘಾತದಿಂದ [illegible] ನಿಧನರಾದರು.

೧೯೭೨ರ ಮಾರ್ಚಿನಲ್ಲಿ ರಾಜ್ಯದ ಮುಖ್ಯಮಂತ್ರಿಯಾದ ಅರಸು ೮೦ರ ಜನವರಿಯಲ್ಲಿ ಲೋಕಸಭೆಗೆ ನಡೆದ ಚುನಾವಣೆಯಲ್ಲಿ ತಮ್ಮ ಕಾಂಗ್ರೆಸ್–[illegible] ಪಕ್ಷ [illegible] ಸೋತು ಹೋದಾಗ ಕಚೇರಿ [illegible] ರಾಜೀನಾಮೆ ಕೊಟ್ಟಿದ್ದರು.

ಕಳೆದ ಎರಡುವರೆ ವರ್ಷಗಳಲ್ಲಿ ವಿರೋಧ ಪಕ್ಷಗಳ ಬಗ್ಗೆ [illegible] ಈ ಹಿನ್ನೆಲೆ [illegible] ಪ್ರಾದೇಶಿಕ ಪಕ್ಷ [illegible]

ಇಂದಿರಾ ಗಾಂಧಿ [illegible] ಆಳ್ವಿಕೆಯ [illegible] ಪ್ರಮುಖ [illegible] ಹಾಗೂ ರಾಜ್ಯದ [illegible] ಹಿಂದುಳಿದ ವರ್ಗಗಳಿಗಾಗಿ ವ್ಯಾಪಕ ಕಾರ್ಯಕ್ರಮ ಜಾರಿಗೆ ತಂದವರು [illegible] ಅರಸು ಖ್ಯಾತರಾಗಿದ್ದರು.

ರಸ್ತೆ ಸುರಕ್ಷತೆಗಾಗಿ 'ಅಂಕುರ ಬಳಗ'ದಿಂದ ಸಹಿ ಸಂಗ್ರಹಣೆ

ಕೊಪ್ಪ: [illegible] ವಾಹನಗಳ ನಿಯಂತ್ರಿತ ವೇಗ, [illegible] ಮುಂತಾದವುಗಳ ವಿರುದ್ಧ [illegible] ಕ್ರಮ ಕೈಗೊಳ್ಳುವುದು, ರಸ್ತೆ [illegible] ಮುಂತಾದವುಗಳ ಮೂಲಕ ಊರಿನಲ್ಲಿ ರಸ್ತೆ ಸುರಕ್ಷತೆ ಏರ್ಪಡಿಸಬೇಕೆಂದು ಒತ್ತಾಯಿಸುವ [illegible] 'ಅಂಕುರ ಬಳಗ'ದ ಸದಸ್ಯರು [illegible] ಸಹಿ ಸಂಗ್ರಹಿಸಿ ಪೋಲೀಸ್ ಮತ್ತು ಲೋಕೋಪಯೋಗಿ ಇಲಾಖೆಗಳಿಗೆ [illegible]

[illegible]

೩೦ ಲಕ್ಷ ರೂ. [illegible] ಡಿ. ಎಂ. ಪುಟ್ಟೇಗೌಡ ಹೇಳಿದರು.

[illegible]

(ವರದಿ [illegible])

ಗೋಕಾಕ್ ವರದಿ: ಸದ್ಯವೇ

ಸರ್ಕಾರದ ಹೊಸ ನಿರ್ಧಾರ

ಬೆಂಗಳೂರು: ಜೂನ್ ೪ ರಂದು ಮುಖ್ಯಮಂತ್ರಿ ಗುಂಡೂರಾವ್ ಅವರು ಅಖಿಲ ಕರ್ನಾಟಕ ಕನ್ನಡ ಕ್ರಿಯಾಸಮಿತಿಯ ಪ್ರತಿನಿಧಿಗಳು ಹಾಗೂ ಇತರ ಹಲವರೊಡನೆ ಗೋಕಾಕ್ ಸಮಿತಿ ವರದಿಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ದಿನವಿಡೀ ಚರ್ಚೆ ನಡೆಸಿದರು. ಪರಿಣಾಮವಾಗಿ ಹೊಂದು ಹೊಸ ಸೂತ್ರವನ್ನು ಸಿದ್ಧಪಡಿಸಲಾಗಿದೆ. ಅದನ್ನು ಸೋಮವಾರದಿಂದ ಶುರುವಾಗುವ ವಿಧಾನ ಸಭೆಯ ಅಧಿವೇಶನದ ಮುಂದಿಟ್ಟು ಅಲ್ಲಿ ನಡೆಯುವ ಚರ್ಚೆಯ ಆಧಾರದ ಮೇಲೆ ಮಂತ್ರಿ ಮಂಡಲವು ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತದೆ.

"ಕಡ್ಡಾಯ ಪ್ರಾದೇಶಿಕ ಭಾಷೆ" ಎಂಬ ಹೆಸರಿನಲ್ಲಿ ಕನ್ನಡಕ್ಕೆ ೧೫೦ ಅಂಕಗಳು ಹಾಗೂ ಉಳಿದೆರಡು ಭಾಷೆಗಳಿಗೆ ೧೦೦ ಮತ್ತು ೫೦ ಅಂಕಗಳು ಇರುವಂತೆ ಹೊಸ ಸೂತ್ರ ರೂಪಿಸಲಾಗಿದೆಯೆಂದು ಹೇಳಲಾಗಿದೆ.

ಗಡಿಕಲ್-ಬಂಡಿಗಡಿ ರಸ್ತೆ

(೧ನೇ ಪುಟದಿಂದ)

ತಾಲೂಕಿಗೆ ಸಿಮೆಂಟ್ ಹಂಚಿಕೆ ಆಗದೇ ತಿಂಗಳುಗಟ್ಟಲೆ ಆಗಿರುವುದಾಗಿಯೂ, ಕೂಡಲೇ ಸ್ವಲ್ಪವಾದರೂ ಸಿಮೆಂಟ್ ದೊರಕುವಂತೆ ಮಾಡಬೇಕೆಂದೂ ತಾ. ಅ. ಮಂ. ಸದಸ್ಯ ಯು. ಕೆ. ಶಾಮಣ್ಣ ಮನವಿ ಮಾಡಿದರು.

"ಮಲೆನಾಡಿನ ಈ ಭಾಗದಲ್ಲಿ ಕೊಳವೆ ಬಾವಿಗಳು ಅಷ್ಟು ಸಮರ್ಪಕವಾಗಿಲ್ಲ. ಕಿಲುಬು ನೀರು ಬರುತ್ತದೆ. ಜನ ನಮ್ಮನ್ನು ದೂರುತ್ತಾರೆ. ಆದ್ದರಿಂದ ಅವಕ್ಕೆ ಬದಲು ತೆರೆದ ಬಾವಿಗಳನ್ನೇ ತೋಡಿಸಲು ಅವಕಾಶ ಕಲ್ಪಿಸಿ" ಎಂದು ಅಹವಾಲು ಸಲ್ಲಿಸಿದವರು ಇನ್ನೊಬ್ಬ ತಾ. ಅ. ಮಂ. ಸದಸ್ಯ ಕೊಲ್ಲಪ್ಪಗೌಡ.

ಪಂಚಾಯಿತಿ ಅಧ್ಯಕ್ಷ ಕೃಷ್ಣಭಟ್ಟ ಸ್ವಾಗತಿಸಿದರು. ಚೂಡಣ್ಣಗೌಡ ಮನವಿ ಪತ್ರ ಅರ್ಪಿಸಿ, ವಂದಿಸಿದರು.

ಮುಸುರೆಹಳ್ಳ ಸೇತುವೆಗೆ ಶಂಕು ಸ್ಥಾಪನೆ

ಕೊಪ್ಪ: ಇಲ್ಲಿಂದ ಕೆಸವೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಮುಸುರೆ ಹಳ್ಳದ ಸೇತುವೆಯ ಶಂಕುಸ್ಥಾಪನೆಯನ್ನು ಮೇ ೨೮ ರಂದು ಸಂಸತ್ಸದಸ್ಯ ಡಿ. ಎಂ. ಪುಟ್ಟೇಗೌಡ ನೆರವೇರಿಸಿದರು.

ಇಪ್ಪತ್ತೈದು ವರ್ಷಗಳಿಂದಲೂ ಈ ಸೇತುವೆಗಾಗಿ ಕೆಸವೆ-ಸಿದ್ದರಮಠ ಪ್ರದೇಶದ ಜನ ಪ್ರಯತ್ನಿಸುತ್ತಲೇ ಇದ್ದರು. ೧೯೮೧-೮೨ರ ಬಜೆಟ್ಟಿನಲ್ಲೇ ಮಂಜೂರಾಗಿದ್ದ ಈ ಸೇತುವೆಯ ನಿರ್ಮಾಣಕ್ಕೆ ಟೆಂಡರ್ ಪಡೇ ಪದೇ ಮುಂದಕ್ಕೆ ಹೋಗುತ್ತಿದ್ದು, ಈಗ ಶಂಕುಸ್ಥಾಪನೆ ನೆರವೇರಿರುವುದರಿಂದ ಸೇತುವೆಯ ಕೆಲಸ ಬೇಗನೇ ಪೂರೈಸಬಹುದೆಂದು ಈ ಗ್ರಾಮಗಳ ಜನ ನಿರೀಕ್ಷಿಸುತ್ತಿದ್ದಾರೆ.

ಗುಣವಂತೆ ಬಡಾವಣೆಯಲ್ಲಿ ನೀರು ಪೂರೈಕೆ ಯೋಜನೆಗೆ ಅಡಿಗಲ್ಲು

ಇದೇ ದಿನ ಗುಣವಂತೆ ಬಡಾವಣೆಯಲ್ಲಿ ಗ್ರಾಮೀಣ ನೀರು ಸರಬರಾಜು ಯೋಜನೆಯ ಶಂಕುಸ್ಥಾಪನೆಯನ್ನು ಬೇಗಾನೆ ರಾಮಯ್ಯ ಉದ್ಘಾಟಿಸಿದರು. ಡಿ. ಎಂ. ಪುಟ್ಟೇಗೌಡ ಅಧ್ಯಕ್ಷತೆ ವಹಿಸಿದ್ದರು.

ಎತ್ತಿನಹಟ್ಟಿ ಹಳ್ಳ ಸೇತುವೆ ಉದ್ಘಾಟನೆ

ಆಗಳಗಂಡಿ: ಇಲ್ಲಿಗೆ ಸಮೀಪದ ಎತ್ತಿನಹಟ್ಟಿಯ ಹಳ್ಳದ ಸೇತುವೆಯನ್ನು ಬೇಗಾನೆ ರಾಮಯ್ಯ ಮೇ ೨೮ ರಂದು ಉದ್ಘಾಟಿಸಿದರು. ಸಂಸತ್ ಸದಸ್ಯ ಡಿ. ಎಂ. ಪುಟ್ಟೇಗೌಡ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಬಿ. ಜಿ. ಚಿದಂಬರ್ ಹೆಚ್. ಜಿ. ರಾಮಪ್ಪಗೌಡ ಮಾತನಾಡಿದರು. ಸೇತುವೆಗಾಗಿ ಜಮೀನು ಪುಕ್ಕಟೆ ಬಿಟ್ಟುಕೊಟ್ಟ ನಾಲ್ವರಿಗೆ ಹಾರ ಹಾಕಿ ಗೌರವಿಸಲಾಯಿತು.

ಈ ಸೇತುವೆಯಿಂದಾಗಿ ಬಿ. ಜಿ. ಕಟ್ಟೆ-ಆಗಳಗಂಡಿ ಮಾರ್ಗವು ಸಂಚಾರಕ್ಕೆ ತೆರೆದಿದ್ದು, ಕೊಪ್ಪ ಆಗಳಗಂಡಿ ಪ್ರಯಾಣ ಸುಮಾರು ನಾಲ್ಕೈದು ಕಿ. ಮೀ. ಗಳಷ್ಟು ಹತ್ತಿರವಾಗಲಿದೆ. ಈ ಮಾರ್ಗದಲ್ಲಿ ಬಸ್ ಸಂಚಾರದ ಪರ್ಮಿಟ್‌ಗಾಗಿ ಉದಯ ಮೋಟಾರ್‌ನವರು ಈಗಾಗಲೇ ಅರ್ಜಿ ಸಲ್ಲಿಸಿರುವುದಾಗಿಯೂ ತಿಳಿದು ಬಂದಿದೆ. ಈ ರಸ್ತೆಗೆ ಟಾರು ಹಾಕಿಸುವ ಕೆಲಸವೊಂದು ಆದರೆ ಈ ಭಾಗದ ಹಲವಾರು ಗ್ರಾಮಗಳವರ ಬಹುದಿನಗಳ ಕನಸೊಂದು ಕೈಗೂಡಿದಂತಾಗುತ್ತದೆ.

ರಾಸಾಯನಿಕ ಗೊಬ್ಬರ ವಿತರಣೆ ತರಬೇತಿ

ಕೊಪ್ಪ: ತಾ॥ ವ್ಯ. ಸೇ. ಸ. ಸಂಘಗಳ ಕಾರ್ಯದರ್ಶಿಗಳ ಹಾಗೂ ಖಾಸಗಿ ರಾಸಾಯನಿಕ ಗೊಬ್ಬರ ವ್ಯಾಪಾರಿಗಳ ತರಬೇತಿ ಸಭೆಯನ್ನು ತಾ. ವ್ಯ. ಮಾ. ಸ. ಸಂಘದಲ್ಲಿ ಕರೆಯಲಾಗಿತ್ತು. ೧೯೮೨-೮೩ನೇ ಸಾಲಿನಲ್ಲಿ ದಾಸ್ತಾನು ಮಾಡುವ ರಾಸಾಯನಿಕ ಗೊಬ್ಬರ, ಕೀಟ ನಾಶಕ, ಉತ್ತಮ ತಳಿಯ ಬೀಜ, ಮತ್ತು ವ್ಯವಸಾಯ ಉಪಕರಣಗಳನ್ನು ದಾಸ್ತಾನು ಮಾಡಿ ಸುವ್ಯವಸ್ಥಿತವಾಗಿ ರೈತರಿಗೆ ಒದಗಿಸುವ ಬಗ್ಗೆಯೂ ಹಾಗೂ ರಹದಾರಿ ನವೀಕರಿಸಿಕೊಳ್ಳುವ ಬಗ್ಗೆಯೂ ಕೊಪ್ಪ ತಾ॥ ಸಹಾಯಕ ಕೃಷಿ ನಿರ್ದೇಶಕ ಎಂ. ಎಸ್. ಸುಬ್ಬಯ್ಯ ಗೌಡ ಸೂಕ್ತ ತರಬೇತಿ ನೀಡಿ ೮೨-೮೩ ನೇ ಸಾಲಿನ ಮುಂಗಾರು ಮತ್ತು ಬೇಸಿಗೆ ಬೆಳೆಯಲ್ಲಿ ಇಡಬೇಕಾದ ದಾಸ್ತಾನು ಬಗ್ಗೆ ವಿವರ ನೀಡಿದರು.

ಎಸ್. ವೆಂಕಟ ಭಟ್ ಸ್ವಾಗತಿಸಿದರು. ನರಸಿಂಹಮೂರ್ತಿ ವಂದಿಸಿದರು.

ಸಂಪಾದಕ: ಪ್ರಕಾಶಕ, ಹಾಗೂ ಮುದ್ರಕ
ಸಿರಿಮನೆ ನಾಗರಾಜ್.
ಅಚ್ಚು: ನೇಸರ ಮುದ್ರಣ, ಕೊಪ್ಪ.

ಸಣ್ಣ ಪತ್ರಿಕೆಗಳಿಗೆ ಅಂಚೆ ರಿಯಾಯತಿಗೆ ಒತ್ತಾಯ

ಮೈಸೂರು: ಈಗಿನ ಅಂಚೆ ದರ ಏರಿಕೆಯಿಂದ ಸಣ್ಣ ಪತ್ರಿಕೆಗಳಿಗೆ ವಿನಾಯ್ತಿ ನೀಡಬೇಕೆಂದು ಅ. ಭಾ. ಸಣ್ಣ ವೃತ್ತ ಪತ್ರಿಕೆಗಳ ಸಂಘ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ಒಂದು ಪತ್ರಿಕೆಗೆ ೨ ಪೈಸೆಯಿಂದ ೫ ಪೈಸೆಗೆ ಈಚೆಗೆ ಅಂಚೆ ದರ ಏರಿಸಿರುವುದನ್ನು ಇಲ್ಲಿ ಜ್ಞಾಪಿಸಲಾಗಿದೆ.

ಬ್ರಾಹ್ಮಣ ಮಹಾಸಭೆ

ಕೊಪ್ಪ ತಾ॥ ಬ್ರಾಹ್ಮಣ ಮಹಾಸಭೆಯ ಪ್ರಥಮ ವಾರ್ಷಿಕ ಸಭೆ ಪಿ. ಜಿ. ಗುರ್ಜರ್ ಅಧ್ಯಕ್ಷತೆಯಲ್ಲಿ ಈಚೆಗೆ ನಡೆಯಿತು. ಅ. ಕ. ಬ್ರಾ. ಮಹಾ ಸಭೆ ಕಾರ್ಯದರ್ಶಿ ವೆಂಕಟ ನಾರಾಯಣ ಮತ್ತು ಯುವಜನ ವಿಭಾಗದ ಉಪಾಧ್ಯಕ್ಷ ಹೆಚ್. ಎಸ್. ಭಟ್ಟ ಅವರೂ ಭಾಗವಹಿಸಿದ್ದರು. ವಿಶೇಷ ಆಹ್ವಾನಿತರಾಗಿದ್ದ ಆನೆಗುಂದದ ಅಗ್ನಿಹೋತ್ರ ರಾಮಚಂದ್ರಭಟ್ಟರಿಗೆ ಸಭೆಯ ಪರವಾಗಿ ೧೦೦ ರೂ. ಗಳ ನೆರವನ್ನು ನೀಡಿ ಗೌರವಿಸಲಾಯಿತು. ಜೆ. ಆರ್. ಕೆ. ರಾಮಭಟ್ಟರು, ಸ್ವಾಗತಿಸಿ, ಎನ್. ಎಸ್. ನಾಗೇಂದ್ರಭಟ್ಟರು ವಂದಿಸಿದರು.

ಕೋಟಿ ರೂ ರೇಷ್ಮೆ ರಫ್ತು

ಬೆಂಗಳೂರು: ಈ ವರ್ಷ ರಾಜ್ಯದಿಂದ ೬೯ ಕೋಟಿ ರೂ. ರೇಷ್ಮೆಯನ್ನು ರಫ್ತು ಮಾಡಲಾಗಿದೆ. ಇದು ಈವರೆಗಿನ ರೇಷ್ಮೆ ವ್ಯಾಪಾರದಲ್ಲಿ ರಾಜ್ಯ ಸಾಧಿಸಿದ ದಾಖಲೆಯಾಗಿದೆ. ಕಳೆದ ವರ್ಷ ೫೨ ಕೋಟಿ ರೂ ರೇಷ್ಮೆ ರಫ್ತಾಗಿತ್ತು.

ಸಮತಾ ವಿದ್ಯಾಲಯಕ್ಕೆ ೧೦ ಶಿಕ್ಷಕರು ಬೇಕು

ಬೆಂಗಳೂರು ಜಿಲ್ಲೆ ಚನ್ನಪಟ್ಟಣ ತಾಲೂಕಿನ ದ್ಯಾವಾಪಟ್ಟಣ ಗ್ರಾಮದಲ್ಲಿ ಸ್ಥಾಪಿಸಲಾಗಿರುವ "ಡಾ॥ ರಾಮ ಮನೋಹರ ಲೋಹಿಯಾ ಸಮತಾ ವಿದ್ಯಾಲಯ" ದಲ್ಲಿ ಶಿಕ್ಷಕರಾಗಿ ತರಬೇತಿ ಪಡೆಯಲು ೧೦ ಅಭ್ಯರ್ಥಿಗಳನ್ನು ಕರೆಯಲಾಗಿದೆ. ಚಿಂತನೆ, ವ್ಯವಸಾಯ ಮತ್ತು ಸಣ್ಣ ಪ್ರಮಾಣದ ತಾಂತ್ರಿಕತೆಗಳನ್ನೊಳಗೊಂಡ ವಿರ್ಮಾನ ರೀತಿಯ ಶಿಕ್ಷಣ ಕ್ರಮಕ್ಕೆ ಶಿಕ್ಷಕರನ್ನು ತಯಾರು ಮಾಡಲಾಗುತ್ತದೆ. ಒಂದು ವರ್ಷ ಪ್ರೊಬೇಶನ್ ಸೇರಿ ಒಟ್ಟು ತರಬೇತಿ ೩ ವರ್ಷ. ಅನಂತರ ಕನಿಷ್ಠ ೩ ವರ್ಷ ಅಲ್ಲೇ ಶಿಕ್ಷಕರಾಗಿ ಕೆಲಸ ಮಾಡಬೇಕು. ಅಭ್ಯರ್ಥಿಗಳ ಊಟ-ವಸತಿಯ ವ್ಯವಸ್ಥೆ ಶಾಲೆಯದು.

ಕನ್ನಡ ಬಲ್ಲ ಕನಿಷ್ಠ ಎಸ್ಸೆಸ್ಸೆಲ್ಸಿ ಓದಿರುವ ಸಮಾನತೆಯಲ್ಲಿ ನಂಬಿಕೆಯಿರುವ ೨೧ ವರ್ಷ ತುಂಬಿದವರು ಅರ್ಜಿ ಹಾಕಬಹುದು. ವಿಳಾಸ: ಡಾ॥ ರಾ. ಲೋ. ಸಮತಾ ವಿದ್ಯಾಲಯ ೧೧, ಜೀವನ್ ಕಟ್ಟಡ, ಪೂರ್ವ ಕುಮಾರ ಪಾರ್ಕ್, ಬೆಂಗಳೂರು-೧.

ದೇವಾಲಯಗಳಿಗೆ ಬೀಗ

ಅಸಗೋಡು: ಈ ಪಂಚಾಯ್ತಿಯ ವ್ಯಾಪ್ತಿಯಲ್ಲಿರುವ ಹೆಬ್ಬರಗುಂಡಿಯ ನೂರು ವರ್ಷ ಪುರಾತನ ದೇವಸ್ಥಾನಗಳಾದ ಗಣಪತಿ, ಈಶ್ವರ ಹಾಗೂ ವೆಂಕಟರಮಣ ದೇವಸ್ಥಾನಗಳಿಗೆ ಮೇ ಮೊದಲ ವಾರದಿಂದಲೂ ಬೀಗ ಬಿದ್ದಿದೆಯೆಂದು ವರದಿಯಾಗಿದೆ. ಊರಿನ ಮುಖಂಡರ ವರ್ತನೆಗೆ ಬೇಸತ್ತು ಅರ್ಚಕರು ನಾಪತ್ತೆಯಾಗಿರುವುದೇ ಇದಕ್ಕೆ ಕಾರಣವೆನ್ನಲಾಗಿದೆ.

ಸ್ಟುಡಿಯೋದಲ್ಲಿ ಕಳವು

ಕೊಪ್ಪ: ಇಲ್ಲಿನ ರೂಪ್‌ಛಾಯಾ ಸ್ಟುಡಿಯೋದಲ್ಲಿ ಕಳೆದ ಸೋಮವಾರ ರಾತ್ರಿ ಬಾಗಿಲಿನ ಚಿಲಕ ಎಬ್ಬಿಸಿ ಒಳಹೊಕ್ಕ ಕಳ್ಳರು ಸುಮಾರು ೨,೭೦೦ ರೂ. ಬೆಲೆಯ ವಸ್ತುಗಳನ್ನು ಅಪಹರಿಸಿದ್ದಾರೆ.

ಫ್ಲಾಶ್, ಎನ್‌ಲಾರ್ಜರ್ ಲೆನ್ಸ್, ಸಿಗಾರ್ ಲೈಟರ್, ಒಂದು ಎಲೆಕ್ಟ್ರಾನಿಕ್ ಕೈ ಗಡಿಯಾರ ಅಲ್ಲದೆ ೪೦ ರೂ ನಗದು ಕಳವಾಗಿದೆ. ಕೊಪ್ಪ ಪೋಲೀಸರು ಮಹಜರು ನಡೆಸಿ ಮೊಕದ್ದಮೆ ದಾಖಲು ಮಾಡಿಕೊಂಡಿದ್ದಾರೆ. ಕಳ್ಳರು ಇನ್ನೂ ಪತ್ತೆಯಾಗಿಲ್ಲ.

ರಾಜ್ಯ ಮಟ್ಟದ ಯುವಜನ ಮೇಳದಲ್ಲಿ ಕೊಪ್ಪ ತಾ॥ನ ಮೂವರಿಗೆ ಪ್ರಶಸ್ತಿ

ಕೊಪ್ಪ: ಧಾರವಾಡದಲ್ಲಿ ಮೇ ೨೬ ರಿಂದ ೨೮ ರ ವರೆಗೆ ನಡೆದ ರಾಜ್ಯ ಮಟ್ಟದ ಯುವಜನ ಮೇಳದಲ್ಲಿ ಮೈಸೂರು ವಿಭಾಗವನ್ನು ಪ್ರತಿನಿಧಿಸಿದ್ದ ಈ ತಾಲೂಕಿನ ಮೂವರಿಗೆ ಪ್ರಶಸ್ತಿಗಳು ಬಂದಿವೆ.

ಜೆ. ಸಿ. ಸುಬ್ರಾವ್ (ಕವನ-ಪ್ರಥಮ), ಸಣ್ಣಕತೆ ದ್ವಿತೀಯ); ಬಿ. ವಿ. ಗಾಯತ್ರಿ (ಜಾ. ಗೀತೆ-ದ್ವಿತೀಯ) ಹಾಗೂ ಬಿ. ಎಸ್. ನಾಗೇಶ್ (ಜಗಟ-ಪ್ರಥಮ) ಇವರೇ ಬಹುಮಾನ ಗಳಿಸಿದವರು.

ನಿಧನ

ನಾರಾಯಣ ನಾಯಕ್

ಕೊಪ್ಪ: ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ಕಾಂಪೌಂಡರ್ ಆಗಿ ಜನಪ್ರಿಯರಾಗಿದ್ದು, ನಿವೃತ್ತರಾಗಿದ್ದ ಕೆ. ಆರ್. ನಾರಾಯಣ ನಾಯಕ್ ಅವರು ಜೂನ್ ೫ ರಂದು ರಾತ್ರಿ ನಿಧನರಾದರು. ಅವರಿಗೆ ೭೧ ವರ್ಷ ವಯಸ್ಸಾಗಿತ್ತು. ಸರ್ಕಾರಿ ಆಸ್ಪತ್ರೆಯಲ್ಲಿ ೩೫ ವರ್ಷ ಸೇವೆ ಸಲ್ಲಿಸಿ ನಿವೃತ್ತರಾದ ನಂತರ ದೇವನ್ ಎಸ್ಟೇಟ್ ಆಸ್ಪತ್ರೆಯಲ್ಲಿ ೮ ವರ್ಷ ಕೆಲಸ ಮಾಡಿದ್ದರು. ಅವರು ೩ ಹೆಣ್ಣು, ೪ ಗಂಡು ಮಕ್ಕಳನ್ನು ಬಿಟ್ಟು ಹೋಗಿದ್ದಾರೆ.

ಶ್ರೀಮತಿ ಸಾವಿತ್ರಮ್ಮ

ಪತ್ರಕರ್ತ-ಲೇಖಕ ಅರಸೀಕೋಟೆ ಗಣೇಶರಾವ್ ಅವರ ತಾಯಿ ಶ್ರೀಮತಿ ಸಾವಿತ್ರಮ್ಮ ೩ ವರ್ಷಗಳ ಸತತ ಅನಾರೋಗ್ಯದ ನಂತರ ತಮ್ಮ ೬೫ ನೇ ವಯಸ್ಸಿನಲ್ಲಿ ಈಚೆಗೆ ನಿಧನರಾದರು. ಅವರಿಗೆ ೫ ಗಂಡು, ೨ ಹೆಣ್ಣು ಮಕ್ಕಳಿದ್ದಾರೆ.